# ಮಾಯಾಮೃಗ ಟೆಲಿ ಧಾರಾವಾಹಿಯ ಕಥಾವಸ್ತು

*(ನಿರ್ದೇಶನ : ಟಿ.ಎನ್. ಸೀತಾರಾಮ್)*




ಮಾಯಾಮೃಗ ಧಾರಾವಾಹಿ ತಮಗೋಸ್ಕರ ಮತ್ತು ತಮ್ಮಂತಹ ಅನೇಕ ಮಂದಿಗೆ ಈ ಸಮಾಜವನ್ನು ಒಂದು ನೆಮ್ಮದಿಯ ತಾಣವಾಗಿಸಬೇಕೆಂಬ ಹಂಬಲದಿಂದ ಸಂಘರ್ಷ ನಡೆಸುವ ಇಬ್ಬರು ಮಧ್ಯಮ ವರ್ಗದ ಮಹಿಳೆಯರ ಯಶೋಗಾಥೆ. ತಮ್ಮ ವೈಯುಕ್ತಿಕ ಜೀವನದ ಸವಾಲುಗಳ ಜೊತೆ ಇತರ ಅಸಹಾಯಕ ಮಂದಿಯ ಜೀವನದಲ್ಲೂ ಮುಗುಳ್ನಗು ತರಲು ಪ್ರಯತ್ನಿಸುವ ಕಥೆ.

ಮಾಳವಿಕಾ ಮಧ್ಯಮ ವರ್ಗದ ಕುಟುಂಬದವಳು. ಸಮಾಜದಲ್ಲಿ ಪ್ರತಿಯೊಬ್ಬರಿಗೂ ಅವರ ಪ್ರತಿಭೆಗೆ ಅನುಗುಣವಾಗಿ ಸಮಾನಾವಕಾಶ ಸಿಗುವಂತಿರಬೇಕು. ಸ್ತ್ರೀಯರಿಗೆ ಮುಕ್ತ ವಾತಾವರಣ ಇರಬೇಕು ಎಂದೆಲ್ಲಾ ಕನಸು ಕಂಡವಳು. ತನಗೆ ಮೇಷ್ಟ್ರು ಆಗಿದ್ದ ಕೃಷ್ಣಪ್ರಸಾದರು ತನ್ನ ಭಾವನೆಗಳನ್ನು ಅರ್ಥ ಮಾಡಿಕೊಂಡಾಗ, ಆತನನ್ನು ಅವರ ತಂದೆತಾಯಿಯ ವಿರುದ್ಧವಾಗಿ ಮದುವೆಯಾಗುತ್ತಾಳೆ. ಮುಂದೆ ತನ್ನ ಸಮಾಜಸೇವೆಯ ಚಟುವಟಿಕೆಯಿಂದಾಗಿ ಆಕಸ್ಮಿಕವಾಗಿ ತನ್ನ ಮಾವನ ವಿರುದ್ಧವೇ ನಿಲ್ಲಬೇಕಾಗುವುದು. ಅತ್ತೆ ಮಾವ ಅವಳನ್ನು ಅವರ ಮಗನಿಂದ ದೂರವಿಡಲು ಪ್ರಯತ್ನಿಸಿದಾಗ, ಮಾಳವಿಕ ಏನು ಮಾಡುತ್ತಾಳೆ???

ಲಕ್ಷ್ಮೀನರಸಿಂಹ ಶಾಸ್ತ್ರಿಗಳು ತಮ್ಮ ಇಚ್ಛೆಯನ್ನು ಅರಿತು ನಡೆಯುವ ಸತಿ ಕಮಲಮ್ಮ ಮತ್ತು ಎಂದೂ ಎದುರಾಡದ ಮೂವರು ಮಕ್ಕಳು - ಶ್ರೀಲಕ್ಷ್ಮಿ, ಶ್ಯಾಮ ಹಾಗೂ ಶಾರದ- ಇವರುಗಳ ನೆಮ್ಮದಿಯ ಸಂಸಾರ. ಕಾಲೇಜ್ ಮುಗಿಸಿದ ಶ್ರೀಲಕ್ಷ್ಮಿಗೆ ಮಾಡೆಲ್ ಆಗುವ ಅವಕಾಶಗಳು ಬಂದಾಗ, ಇಂತಹ ಕೆಲಸ ಮರ್ಯಾದಸ್ತ ಕುಟುಂಬದವರಿಗಲ್ಲಾಂತ ಶಾಸ್ತ್ರಿಗಳು ತಿರಸ್ಕರಿಸುತ್ತಾರೆ. ಶಾಸ್ತ್ರಿಗಳ ಹಿಂಬಾಲಕರಲ್ಲಿ ಒಬ್ಬನಾದ ರಘು ಶ್ರೀಲಕ್ಷ್ಮಿಯನ್ನು ಮದುವೆಯಾಗುತ್ತೇನೆಂದು ಹೇಳಿ, ನಿಶ್ಚಿತಾರ್ಥದ ದಿನ ಸನ್ಯಾಸಿಯಾಗುವುದಾಗಿ ತಿಳಿಸುತ್ತಾನೆ! ಕ್ರಮೇಣ ಶಾಸ್ತ್ರಿಗಳ ಮೂವರು ಮಕ್ಕಳು ತಮ್ಮ ಬದುಕಿನ ಲಕ್ಷ್ಯವನ್ನು ತಲುಪುವುದಕ್ಕಾಗಿ ಮನೆಬಿಟ್ಟು ಹೋಗುತ್ತಾರೆ. ಶಾಸ್ತ್ರಿಗಳು ತಮ್ಮನ ಜೊತೆ ಮನಸ್ತಾಪ ಉಂಟಾಗಿ ಮನೆಬಿಟ್ಟು ಹೆಂಡತಿಯ ಜೊತೆ ಬೇರೆಡೆಗೆ ಹೋಗುತ್ತಾರೆ. ಈ ಕುಟುಂಬ ಮುಂದೆ ಒಂದಾಗುತ್ತದೆಯೆ??

ಇಂತಹ ಅನೇಕ ಕುತೂಹಲಕರ ತಿರುವುಗಳಿಂದ ಈ ಧಾರಾವಾಹಿ ವೀಕ್ಷಕರ ಆಸಕ್ತಿಯನ್ನು ಕಡೆಯತನಕ ಹಿಡಿದಿಟ್ಟು, ಅಪಾರ ಜನಪ್ರಿಯತೆ ಪಡೆದಿದೆ!

★ ★ ★